ಬಿ. ಬಸವರಾಜ್, ಹರಿಹರ

ಕಣ್ಮುಚ್ಚಿ ಧ್ಯಾನಿಸುವ ದೇವಾಲಯ ಶ್ರೇಷ್ಠವೋ, ಕಣ್ತೆರೆದು ಓದುವ ಗ್ರಂಥಾಲಯ ಶ್ರೇಷ್ಠವೋ?



ಗ್ರಂಥಾಲಯವೇ. ಸದ್ವಿದ್ಯೆಗಿಂತ ದೇವನಿಲ್ಲವೀ ಜಗದೊಳ್.

ಪಿ.ಜೆ. ರಾಘವೇಂದ್ರ, ಮೈಸೂರು

ಸಿಎಂ ಕುರ್ಚಿ ಸ್ಥಾವರವೋ, ಜಂಗಮವೋ?

ಕುರ್ಚಿ ಜಂಗಮ, ಸಿಎಂ ಸ್ಥಾವರ.

ಶ್ರೀನಿವಾಸ ಕೆ., ಬೆಂಗಳೂರು

ರಾಜಕಾರಣಿಗಳು ಈಗ ಸಂವಿಧಾನದ ಬಗ್ಗೆ ಮಾತನಾಡುವುದು ಹೆಚ್ಚಾಗಿದೆಯಲ್ಲ?

'ಅದರಲ್ಲಿ ಬಹಳ ಆರ್ಟಿಕಲ್ಸ್ ಇವೆ' ಎಂದುದರಿಂದ ಕೊಳ್ಳುವ ವಸ್ತು ಎಂದುಕೊಂಡಿದ್ದಾರು.

ಕೆ.ಪಿ. ಮಂಜುನಾಥ್, ಕೆ.ಟಿ.ಹಳ್ಳಿ

ಕಮಲ ಅರಳುವುದು ಯಾವಾಗ?



ಕೆರೆಕೆರೆದು ರಾಡಿಯಾಗಿರುವ ಕೆರೆ ಮತ್ತೆ ನಿರ್ಮಲವಾದಾಗ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಸ್ನಾನಕ್ಕೆ ಸೋಪು ಬೇಕು. ಧ್ಯಾನಕ್ಕೆ?

ಪ್ರಾಂ'ಜಲ'ತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಪ್ರಪಂಚದಲ್ಲಿ ಭೂತ, ವರ್ತಮಾನ, ಭವಿಷ್ಯಗಳನ್ನು ಕಂಡವರು ಇದ್ದಾರಾ?

ಭೂತ (crime news), ವರ್ತಮಾನ (news), ಭವಿಷ್ಯ (ಜ್ಯೋತಿಷ) ನಾವೇ ನೋಡುತ್ತೇವಲ್ಲ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಬಾರ್‌ನಲ್ಲಿ ಕೂತವ, ಗುಡಿಯಲ್ಲಿ ಕೂತವ ಏನು ಯೋಚಿಸುತ್ತಾನೆ?

ಮೊದಲು ತೀರ್ಥದ ಬಗ್ಗೆ, ನಂತರ ಮಂಗಳಾರತಿಯ ಬಗ್ಗೆ.

ಎಂ.ಜಿ. ಉಮಾ, ಬಳ್ಳಾರಿ

ಕಬ್ಬಿಣ ಕರಗುವುದಿಲ್ಲ; ಬಿಸಿ ತಟ್ಟಲೇಬೇಕು. ಈ ವಾಕ್ಯವನ್ನು ರಾಜಕೀಯಕ್ಕೆ ಹೋಲಿಸಿದರೆ?

ಭಿನ್ನಮತ ಕರಗುವುದಿಲ್ಲ. ಸೂಟ್‌ಕೇಸ್ ಮುಟ್ಟಲೇಬೇಕು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಪ್ರಗತಿಯ ಮೆಟ್ಟಿಲುಗಳು ಯಾವುವು?

ಅಧ್ಯಯನ, ಅವಕಾಶ, ಅನುಷ್ಠಾನ, ಅನುಸರಣೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಸೊಸೆ ಬಂದಾಗ 'ಮನೆಯ ಮಹಾಲಕ್ಷ್ಮಿ' ಎನ್ನುತ್ತಾರೆ. ಆದರೆ ಅಳಿಯನಿಗೇಕೆ ಮಹಾವಿಷ್ಣು ಎನ್ನುವುದಿಲ್ಲ?

ವಿಷ್ಣುವಿನಂತೆಯೇ ಮನೆ ಅಳಿಯ ಆಗಿಬಿಟ್ಟಾನೆಂಬ ಭಯ!

ಬೂಕನಕೆರೆ ವಿಜೇಂದ್ರ, ಮೈಸೂರು

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಏಕೆ ಬರೆ ಹಾಕುವುದು?

ಪುರುಷನು ಅಸ್ವಸ್ಥನಾದರೆ ನೋವುಣ್ಣುವುದು ಸ್ತ್ರೀಯೇ ಎಂದು ಸೂಚಿಸಲು.

ಪಿ. ಜಯವಂತ ಪೈ, ಕುಂದಾಪುರ

ಕತೆಗೂ, ಕವಿತೆಗೂ ವ್ಯತ್ಯಾಸವೇನು?

ಸದ್ಯದ ಪರಿಸ್ಥಿತಿಯಲ್ಲಂತೂ ಹಾರಿಝಾಂಟಲ್ಲಾಗಿ ಬರೆದರೆ ಕತೆ, ವರ್ಟಿಕಲ್ಲಾಗಿ ಬರೆದರೆ ಕವಿತೆ.

ಅನಸೂಯಾ ಟಿ. ಕೇದಿಗೆಮನೆ

ಸುಖ, ದುಃಖ ಬಿಟ್ಟರೆ ಬದುಕಿನಲ್ಲಿ ಇನ್ನೇನಿದೆ?

ಉದಾಸೀನತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಮಠ ಸೇರಬೇಕಾದರೆ ಲೈಸೆನ್ಸ್ ಪಡೆಯಬೇಕಾ?

ಸಿಸಿ ಟೀವಿಗಳು ಎಲ್ಲಿವೆ ಎಂಬ ಸೆನ್ಸ್ ಇದ್ದರೆ ಸಾಕು ಎಂದನೊಬ್ಬ ಮಠಜೀವಿ.

## ಬಹುಮಾನಿತ ಪ್ರಶ್ನೆ

ವಸುಧಾ ಜೈಶಂಕರ್, ಬೆಂಗಳೂರು

ಅನುಕಂಪವೆಂಬ ಚಿನ್ನದ ಸೂಜಿಯಲ್ಲಿ ಚುಚ್ಚಿ ನೋಯಿಸುವವರಿಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು?

ನಿರ್ಲಿಪ್ತತೆಯ ಕವಚ ಧರಿಸಿ.

ಬಿ. ಚಂದ್ರೇಗೌಡ, ಬೆಂಗಳೂರು

'ಅರಣ್ಯರೋದನ' ಎಂದರೇನು?

'ನಿಮ್ಮ ಸ್ವಾರ್ಥಕ್ಕೋಸ್ಕರ ನನ್ನನ್ನ ಕೊಲ್ಬೇಡ್ರೋ' ಎಂಬ ಕಾನನದ ಅಳು.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಜ್ಞಾನ ದೊಡ್ಡದೋ, ಹಣ ದೊಡ್ಡದೋ?

ಹಣವೇ. ಜ್ಞಾನವಿಲ್ಲದೆ ಬದುಕಬಹುದು. ಹಣವಿಲ್ಲದೆ ಸಾಧ್ಯವಿಲ್ಲ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ

ಬ್ರಹ್ಮ, ವಿಷ್ಣು, ಮಹೇಶ್ವರ; ಈ ಮೂವರಲ್ಲಿ ಯಾರು ದೊಡ್ಡವರು?



ಶಿವನೇ; ವಿಷ್ಣುವು ಲಕ್ಷ್ಮಿಯನ್ನು ಕಾಣುವುದಕ್ಕೆ ಮುಂಚೆಯೇ ಶಿವನ ಮದುವೆಯಾಗಿತ್ತಲ್ಲ.

ರತ್ನಜ, ಮೈಸೂರು

ಎಲ್ಲವನ್ನೂ ಪುರುಷ ಪ್ರಯತ್ನ ಎನ್ನುವರಲ್ಲ, ಸ್ತ್ರೀ ಪ್ರಯತ್ನ ಇಲ್ಲವೆ?

ಪುರುಷನನ್ನು ನೆಟ್ಟಗಾಗಿಸಲು ಒದ್ದಾಡುವುದು ಸ್ತ್ರೀ ಪ್ರಯತ್ನವೇ.

ಅನಂತಪದ್ಮನಾಭ ಎಚ್.ಎಮ್. ಮೈಸೂರು

ಎಲ್ಲರನ್ನು ಕಾಯುವ ದೇವರ ಗರ್ಭಗುಡಿಗೆ ಏಕೆ ಬೀಗ ಹಾಕುತ್ತಾರೆ?

ಯಾವುದೋ ಭಕ್ತನ ಕರೆಗೆ ಓಗೊಟ್ಟು ಹೋಗಿಬಿಟ್ಟಾನೆಂಬ ಭಯ.

**ರಾಮ್**